ಮಾನ್ಯ ಸದಸ್ಯರು ಹೇಳಿದ್ದಾರೆ ಅದು ವಾಸ್ತವವಾದ ಸಂಗತಿ. ನಮ್ಮ ಸ್ಪೇಟ್ ಮಿನಿಸ್ಟರ್ ಅವರು ಈ ಬಗ್ಗೆ ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಒಂದು ಸ್ಟೇಟ್‌ಮೆಂಟ್ ಮಾಡಿದ್ದರು. ತಾಲ್ಲೂಕ್ ಬೋರ್ಡಿನವರಿಗೆ ಮತ್ತು ಸರ್ಕಾರಕ್ಕೆ ಒಂದು ಅಗ್ರಿಮೆಂಟ್ ಆದಮೇಲೆ ಈ ಶಾಲೆಯ ಕಟ್ಟಡದ ರಿಪೇರಿಯಾಗಲೀ, ಹೊಸ ಕೊಠಡಿಗಳನ್ನು ಕಟ್ಟಿಸುವುದಾಗಲೀ ಕೈಕೊಳ್ಳುವುದು ಒಳ್ಳೆಯದೆಂದು ಕಾನೂನು ಇಲಾಖೆಯವರು ಮತ್ತು ಹಣ ಕಾಸಿನ ಇಲಾಖೆಯವರು ಸಲಹೆ ಮಾಡಿದ್ದರು. ಈಗ ಅದೆಲ್ಲಾ ಮುಗಿದಿರುವುದರಿಂದ ನಮ್ಮ ಡೈರೆಕ್ಟರ್ ಅವರು ಚೀಫ್ ಇಂಜಿನಿಯರ್ ಅವರಿಗೆ ಒಂದು ಕಾಗದ ಬರೆದು ಅದರ ರಿಪೇರಿ ಬಗ್ಗೆ ಪ್ಲಾನ್ ಅಂಡ್ ಎಸ್ಟಿಮೇಟ್ ಮಾಡಿ ಕಳಿಸಿಕೊಡಿ ಎಂದು ಹೇಳಿದ್ದಾರೆ ಅದರ ರಿಪೇರಿಯಾಗುವವರೆಗೆ ಅಲ್ಲಿರತಕ್ಕಂಥ ಪ್ರೈಮರಿ ಶಾಲೆಯಲ್ಲಿಯೇ ಪ್ರಾಥಶಾಲೆಯನ್ನು ತಾತ್ಕಾಲಿಕವಾಗಿ ನಡೆಸುವುದಕ್ಕೆ ಏರ್ಪಾಡು ಮಾಡಬಹುದೆಂದು ಹೇಳಿದ್ದೇವೆ. ಪ್ರೈಮರಿ ಶಾಲೆಗೆ ಸೇರಿದಂತೆ 8 ರೂಮುಗಳಿವೆ ಜೊತೆಗೆ ಒಂದು ಚಾಲ್ಟ್ರಿಯನ್ನು ತೆಗೆದುಕೊಂಡು ಶಾಲೆ ನಡೆಸುತ್ತಿದ್ದಾರೆ. ಆದಕಾರಣ ಬೆಳಿಗ್ಗೆ ಪ್ರೈಮರಿ ಶಾಲೆಯನ್ನು ನಡೆಸಿ ಮಧ್ಯಾಹ್ನದ ನಂತರ ಪ್ರಾಢಶಾಲೆಯನ್ನು ನಡೆಸಬಹುದೆಂದು ಹೇಳಿದ್ದೇವೆ.

ಶ್ರೀ ಬೆಟ್ಟಸ್ವಾಮಿಗೌಡ.—ಈಗ ಪ್ರೈಮರಿ ಶಾಲೆಯವರಿಗೇ ಸ್ಥಳ ಸಾಲದೆ ಬೇರೆ ಕಡೆ ನಡೆಸುತ್ತಿದ್ದಾರೆ. ಆದಕಾರಣ ಅವರು ಪ್ರಾಢಶಾಲೆ ನಡೆಸಲು ಅವಕಾಶ ಕೊಡುವುದು ಸಾಧ್ಯವಾಗುವುದಿಲ್ಲ. ತಾಲ್ಲೂಕ್ ಬೋರ್ಡಿನ ಅಧ್ಯಕ್ಷರು ಅಗ್ರಿಮೆಂಟಿಗೆ ಸಹಿ ಮಾಡಿದ್ದರೂ ಸಹ ಇಲ್ಲಿಯವರೆಗೆ ಸರ್ಕಾರದವರು ಆ ಕಟ್ಟಡವನ್ನು ರಿಪೇರಿ ಮಾಡಿಸದಿರುವುದಕ್ಕೆ ಕಾರಣವೇನು ? ಆ ಕಟ್ಟಡದ ರಿಪೇರಿ ಮಾಡಿಸದೇ ಹೋದರೆ ಸರ್ಕಾರ ಅದರಲ್ಲಿ ವಿಫಲವಾಗಿದೆ ಎಂದು ಹೇಳಬೇಕೇ ಅಥವಾ ಇಲ್ಲ ಎಂದು ಹೇಳಬೇಕೇ ? 9 ತಿಂಗಳ ಹಿಂದೆ ಕಾಲ್ ಅಟೆನ್‌ಷನ್ ಮೂಲಕ ಈ ವಿಷಯ ಪ್ರಸ್ತಾಪ ಮಾಡಿದ್ದರೂ ಸಹ ಇಲ್ಲಿಯವರೆಗೆ ರಿಪೇರಿ ಮಾಡಿಸದಿರಲು ಕಾರಣವೇನು ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಕೆಲವು ಅಗ್ರಿಮೆಂಟ್‌ಗಳು ಆಗಬೇಕಾಗಿದ್ದರಿಂದ ವಿಧಾನವಾಯಿತು ; ಈಗ ಪ್ಲಾನ್ ಅಂಡ್ ಎಸ್ಟಿಮೇಟ್ ತಯಾರು ಮಾಡುವುದಕ್ಕೆ ಹೇಳಿದ್ದೇವೆ. ಅದು ಆದಮೇಲೆ ತೆಗೆದುಕೊಳ್ಳುತ್ತೇವೆ.

ಶ್ರೀ ಬೆಟ್ಟಸ್ವಾಮಿಗೌಡ.—ಆ ಕಟ್ಟಡಕ್ಕೆ ರಿಪೇರಿ ಮಾಡಲು ಸಾಧ್ಯವಿಲ್ಲ, ಬೇರೆ ಕಟ್ಟಡವನ್ನೇ ಕಟ್ಟಬೇಕು ಎಂದು ನಿಮ್ಮ ಇಂಜಿನಿಯರ್ ಅವರು ಸಲಹೆ ಕಳಿಸಿಕೊಟ್ಟಿದ್ದಾರೆಂದು ನಾನು ಕೇಳಿದ್ದೇನೆ; ಇದರ ಬಗ್ಗೆ ಏನು ವಿಚಾರ ಮಾಡಿದ್ದೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಆ ಸಲಹೆ ನಮ್ಮ ಗಮನಕ್ಕೆ ಬಂದಿಲ್ಲ. ಬಂದರೆ ಪರಿಶೀಲನೆ ಮಾಡಲಾಗುವುದು.

Notice of an Adjournment Motion

re : Shifting of the Toddy Shop from TCM Royan Road

† ಶ್ರೀ ಟಿ. ಆರ್. ಶಾಮಣ್ಣ(ಕೋಚೆ).—ಮಾನ್ಯ ಅಧ್ಯಕ್ಷರೇ, ಈ ತಿಂಗಳ 18ನೇ ತಾರೀಖು ಟಿ. ಸಿ. ಎಂ. ರಾಯನ್ ರೋಡಿನಲ್ಲಿರುವ ಹೆಂಡದ ಅಂಗಡಿಯನ್ನು ಅಲ್ಲಿಂದ ತೆಗೆಸುವುದರ ಬಗ್ಗೆ ಮಾನ್ಯ ಮಂತ್ರಿಗಳು ನನ್ನ ಕಾಲ್ ಅಟೆನ್‌ಷನ್ ನೋಟೀಸ್‌ಗೆ ಉತ್ತರ ಕೊಡುವಾಗ ಮಾಡಿದ ಸ್ಟೇಟ್‌ಮೆಂಟ್ ಬಗ್ಗೆ, ಅಂದೇ ನಾನು ಕೇಳಿದ ಕೆಲವು ಪ್ರಶ್ನೆಗಳಿಗೆ ಅವರು ಕೊಟ್ಟ ಉತ್ತರ ಸತ್ಯಕ್ಕೆ ದೂರವಾಗಿದೆ. ಅದನ್ನು ನಾನು ಈಗ ಸ್ಪಷ್ಟಪಡಿಸಬೇಕಾಗಿದೆ.

ಮೊದಲನೆಯದಾಗಿ, ಅವರು ಹೇಳಿದ್ದೇನೆಂದರೆ, ಅಲ್ಲಿರುವ ದೇವಸ್ಥಾನವನ್ನು ಕಟ್ಟುವುದಕ್ಕೆ ಮೊದಲೇ ಅಲ್ಲಿ ಹೆಂಡದ ಅಂಗಡಿ ಇತ್ತು ಎಂದು. ಆದರೆ ನನ್ನ ಹತ್ತಿರವಿರುವ ಎವಿಡೆನ್ಸ್ ಪ್ರಕಾರ 1940ನೇ ಇಸವಿಯಲ್ಲಿಯೇ ಅಂದು ಎಂ. ಎಲ್. ಸಿ. ಆಗಿದ್ದ ಶ್ರೀ ಮುರುಗೇಶ ಪಿಳ್ಳೆ ಎಂಬುವರು ಆ ದೇವಸ್ಥಾನವನ್ನು ಕಟ್ಟಿಸಲೇ ಫಾಂಡೇಷನ್ ಹಾಕಿರುವುದಕ್ಕೆ ಸಾಕ್ಷಿ ಇದೆ. ಮತ್ತು ಅಲ್ಲಿರುವ ಕಮ್ಯುನಿಟಿ ಹಾರ್‌ಗೆ 1946ರಲ್ಲಿ ರಾಯನ್ ಅವರು ಫಾಂಡೇಷನ್ ಹಾಕಿದ್ದಕ್ಕೆ ಸಾಕ್ಷಿ ಇದೆ. ಆದರೆ ಅಲ್ಲಿ ಹೆಂಡದ ಅಂಗಡಿ ಪ್ರಾರಂಭವಾಗಿದ್ದು ಇತ್ತೀಚೆಗೆ. ನಾನು ಈ ಊರಿನಲ್ಲಿ ಕಳೆದ 50 ವರ್ಷಗಳಿಂದಲೂ ಇದ್ದೇನೆ. ಮತ್ತು ಮಾನ್ಯ ನಾಗಣ್ಣನವರು ಅವರು ಹುಟ್ಟಿದಾಗಿನಿಂದಲೂ ಇಲ್ಲಿಯೇ ಇದ್ದಾರೆ. ಆ ದೇವಸ್ಥಾನದ ಗೋಪುರವನ್ನು ಮಾತ್ರ 6 ವರ್ಷಗಳ ಕೆಳಗೆ ಕಟ್ಟಿಸಲಾಗಿದೆ. ಅದಕ್ಕೆ ಮಾನ್ಯ ನಾಗಣ್ಣನವರೇ ಸಿಮೆಂಟ್ ಕೊಟ್ಟಿದ್ದಾರೆ. ಆದಕಾರಣ ಆ ಜಾಗದಲ್ಲಿ ಹೆಂಡದ ಅಂಗಡಿ

ಬರುವುದಕ್ಕೆ ಮೊದಲೇ ದೇವಸ್ಥಾನವಿತ್ತು ಎಂಬುದು ಸ್ಪಷ್ಟವಾಗುತ್ತದೆ. ಒಂದು ಹೆಂಡದ ಅಂಗಡಿ ತೆರೆಯಬೇಕಾದರೆ ಅದರ ಸಮೀಪ ನ್ಯೂಲುಗಳು ಆಗಲೀ, ದೇವಸ್ಥಾನಗಳಾಗಲೀ, ಹರಿಜನರ ಕೇರಿಗಳಾಗಲೀ, ಕಾಲೇಜ್‌ಗಳಾಗಲೀ ಇರಬಾರದೆಂದು ಸರ್ಕಾರದ ಆಜ್ಞೆಯಿದೆ, ಅಂದು ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಈ ಅಂಗಡಿ ಹತ್ತಿರ ಒಂದು ಟಿಂಬರ್ ಯಾರ್ಡ್ ಇದೆಯೇ ಹೊರತು ಮನೆಗಳು ಇಲ್ಲ ಎಂದು ಹೇಳಿದರು. ಆದರೆ ಆ ಜಾಗದ ನಕ್ಷೆಯನ್ನು ನಾನು ಸಿದ್ಧಪಡಿಸಿಕೊಂಡು ಬಂದಿದ್ದೇನೆ. ಅದರ ಪ್ರಕಾರ ಅಂಕಿಅಂಶಗಳನ್ನು ಕೊಡುವುದಾದರೆ ದೇವಸ್ಥಾನದ ಪಕ್ಕದಲ್ಲಿ ಸ್ವಲ್ಪ ಖಾಲಿ ಜಾಗವಿದೆ. ಅದರ ಪಕ್ಕದಲ್ಲಿಯೇ ಹೆಂಡದ ಅಂಗಡಿ ಇದೆ. ಅದಕ್ಕೆ 30 ಅಡಿ ದೂರದಲ್ಲಿ ಸಾರಾಯಿ ಅಂಗಡಿ ಸಹ ಇದೆ. ಈ ಅಂಗಡಿಗೆ ಎದುರುಗಡೆಯಲ್ಲಿ ಮಹಡಿ ಮನೆಗಳು ಇವೆ. ಮೇಲೆ ಕೆಳಗೆ ಸಂಸಾರಗಳು ವಾಸ ಮಾಡುತ್ತಿವೆ. ಹೆಂಗಸರು ಮತ್ತು ಮಕ್ಕಳು ಆ ಅಂಗಡಿಯ ಮುಂದೆಯೇ ಓಡಾಡಬೇಕಾಗಿದೆ ಜೊತೆಗೆ ಆ ಅಂಗಡಿಗಳ ಹತ್ತಿರದಲ್ಲಿಯೇ ಪೋಲೀಸ್ ಕ್ವಾರ್ಟರ್ಸ್ ಸಹ ಇದೆ. ಅಲ್ಲಿನ ಹರಿಜನರ ಬಗ್ಗೆ ತಮಗೆ ಕನಿಕರ ಇಲ್ಲದಿದ್ದರೂ ಪರವಾಗಿಲ್ಲ ; ಅಲ್ಲಿರುವ ಪೋಲೀಸರ ಮೇಲಾದರೂ ಕನಿಕರ ಇಟ್ಟು ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ ಇಲ್ಲಿ ಇನ್ನೊಂದು ಮುಖ್ಯಾಂಶವನ್ನು ನಭೆಯ ಮುಂದೆ ಇಡುತ್ತೇನೆ. ಹೆಂಡದ ಅಂಗಡಿಗಳು ಇಲ್ಲವೇಹೋದರೆ, ಕಳ್ಳಭಟ್ಟಿ ಸಾರಾಯಿ ಜಾಸ್ತಿಯಾಗುತ್ತದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ತಾವು ಬಂದರೆ ತಮಗೆ ತೋರಿಸುತ್ತೇನೆ —ಹೆಂಡದ ಅಂಗಡಿ ಪಕ್ಕದಲ್ಲಿಯೇ ಕಳ್ಳಭಟ್ಟಿ ಸಾರಾಯಿ ಮಾರುತಾ ಇದ್ದಾರೆ. ಆದುದರಿಂದ ಕಳ್ಳಭಟ್ಟಿ ಸಾರಾಯಿ ಏನೂ ಕಡಮೆ ಮಾಡುವುದಕ್ಕಾಗುವುದಿಲ್ಲ. ಅಲ್ಲಿರತಕ್ಕ ಸೇಂದಿ ಅಂಗಡಿಯಲ್ಲಿ ಕೊಡತಕ್ಕ ಹೆಂಡ—ಹೆಂಡವೆಲ್ಲ, ವಿಷ. ನವಾಸಾಗರವನ್ನು ನೀರಿಗೆ ಬೆರಸಿ ಕೊಡತಕ್ಕ ಹೆಂಡ ಕಳ್ಳಭಟ್ಟಿ ಸಾರಾಯಿಗಿಂತ ಹೆಚ್ಚು ಮನುಷ್ಯನ ಶರೀರಕ್ಕೆ ಹಾನಿ ಮಾಡುತ್ತದೆ. ನವಾಸಾಗರ ಬೆರಸಿದ ಹೆಂಡ ಕುಡಿಯುವುದಕ್ಕಿಂತ ಬದಲು ಕಳ್ಳಭಟ್ಟಿ ಸಾರಾಯಿ ಕುಡಿಯುವುದೇ ಮೇಲು ಇದರ ಬಗ್ಗೆ ಏತಕ್ಕೆ ಮಾನ್ಯ ಮಂತ್ರಿಗಳು ಗಮನಕೊಟ್ಟಿಲ್ಲ ಎಂದು ನಾನು ಕೇಳಬಯಸುತ್ತೇನೆ.

ಅಧ್ಯಕ್ಷರು.—ತಾವು ಕೊಟ್ಟಿರುವ ಪ್ರಿವಿಲೇಜ್ ನೋಟೀಸ್ ಮಾನ್ಯ ಮಂತ್ರಿಗಳು ನಿರಸನವನ್ನು ಮಿಸ್‌ಲೀಡ್ ಮಾಡಿದ್ದಾರೆ ಎಂದು. ಆದರೆ, ಈಗ ಹೊಸ ಹೊಸ ವಿಷಯಗಳನ್ನು ಹೇಳುತಾ ಇದ್ದಾರೆ.

ಶ್ರೀ ಟಿ. ಆರ್. ಶಾಮಣ್ಣ.—ಆ ಹೆಂಡದ ಅಂಗಡಿ ಬಳಿ ಹರಿಜನ ಕಾಲೋನಿ ಇರುವುದರಿಂದ, ಮತ್ತು ಮಂತ್ರಿಗಳವರ ಹೇಳಿಕೆಗೂ ವಾಸ್ತವಾಂಶಕ್ಕೂ ವ್ಯತ್ಯಾಸ ಇರುವುದರಿಂದ, ಅವರು ಕೊಟ್ಟಿರತಕ್ಕ ಹೇಳಿಕೆ ತಪ್ಪು ಎಂದು, ನನ್ನ ಪ್ರಿವಿಲೇಜ್‌ಮೋಷನನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

† Sri S. M. YAHYA (Minister for Labour and Excise).—Madam Speaker, the other day I made a statement mainly concerning with the Government's policy with regard to location of the liquor shops. The Government's policy is very clear that as far as possible the liquor shops should not be near the temples or places of worship or educational institutions. In this matter there is one thing we must all be clear that in 1961 when prohibition was introduced and prohibition was scrapped in 1967. Therefore the prevailing law at present is the Excise Law. While enforcing excise law we should certainly keep in mind the health of the people and the location of these shops. On the other hand, we should also keep in mind that as far as possible there must not be illicit distillation and also the Government revenue should not be reduced. Further we must also, to a certain extent, be concerned with the convenience to the consumers because there is no prohibition. So our frame of mind should not be in such a way that we are still in prohibition era. Therefore the other day I only explained the policy of the Government. In fact I had visited the place personally and I addressed the workers of that area and also promised that I would visit again and a proper action would be taken in the

next auction season. I assure that we would certainly consider as far as possible in the next auction season. The Government Order also says that as far as possible it should not be near the place of worship. But the word "near" is not defined. But I can assure the hon. Member that certainly I will consider this matter at the time of next auction.

ಶ್ರೀ ಟಿ. ಆರ್. ಶಾಮಣ್ಣ.—ಅಲ್ಲರುವ ಹೆಂಡದ ಅಂಗಡಿಯನ್ನು ಅಲ್ಲಿಂದ ತೆಗೆಸಿಬಿಡಲು ಎಂದು ಅರಿಕೆ ಮಾಡುತ್ತೇನೆ.

Sri S. M. YAHYA.—Certainly we will consider it.

MADAM SPEAKER.—In view of the reply by the Hon. Minister I treat this matter as closed.

Taking up certain notices

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಸಭಾಧ್ಯಕ್ಷಣಿಯವರೇ, ಸೆಕ್ಷನ್ 312ರ ಪ್ರಕಾರ ಒಂದು ನೋಟೀಸನ್ನು ಕಳುಹಿಸಿದ್ದೆ. ಅದು ಕಾಜಲಗಿ ಮಂತ್ರಿಗಳಿಗೆ ಸಂಬಂಧಪಟ್ಟಿದ್ದು. ಅವರು ಹೈಕೋರ್ಟ್ ತೀರ್ಮಾನವನ್ನು ಉಲ್ಲಂಘಿಸಿದ್ದಾರೆ. ಅದನ್ನು ಆದಷ್ಟುಬೇಗ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಒಂದೊಂದಾಗಿ ನಾವು ಅಜೆಂಡಾದಲ್ಲಿ ಸೇರಿಸುತ್ತಾ ಬರುತ್ತಿದ್ದೇವೆ. ತಮ್ಮದು ಮುಂದೆ ಬರುತ್ತದೆ.

ಶ್ರೀ ಪ್ರಭಾಕರ್ ಶೇಲ್ಕರ್.—8 ದಿವಸಗಳ ಹಿಂದೆ ನಾನು ಒಂದು ಕಾಲಿಂಗ್ ಅಟೆನ್ಷನ್ ನೋಟಿಸ್ ಕಳುಹಿಸಿದ್ದೆ...

ಅಧ್ಯಕ್ಷರು.—ಅದು ಬಂದಿದ್ದರೆ, ನಾಳೆ ನೋಡಿ ಅದನ್ನು ಪಟ್ಟಿಯಲ್ಲಿ ಸೇರಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಶ್ರೀಮಾನ್ ಚಿಕ್ಕೇಗೌಡರು ಕಳೆದ ಸಾರಿ ಗೊಬ್ಬರದ ವಿತರಣೆಗೆ ಸಂಬಂಧಪಟ್ಟ ಹಾಗೆ ಉತ್ತರ ಕೊಟ್ಟಾಗ, ಸಭೆಯನ್ನು ತಪ್ಪುದಾರಿಗೆ ಎಳೆದಿದ್ದಾರೆ ಎಂಬುದರ ಬಗ್ಗೆ ಒಂದು ಪ್ರಿವಿಲೇಜ್ ಮೋಷನ್ ಕಳುಹಿಸಿಕೊಟ್ಟಿದ್ದೇನೆ. ಕೇಂದ್ರ ಸರ್ಕಾರದೊಂದಿಗೆ ಟೆಲಿಫೋನಿನಲ್ಲಿ ಮಾತನಾಡಿ, ಗೊಬ್ಬರವನ್ನು ಹೈರೇಟಿನಲ್ಲಿ ಮಾರಿದ್ದಾರೆ ಎಂದು. ಇದನ್ನು ಕೊಟ್ಟು 8 ದಿವಸಗಳಾಗಿವೆ.

ಅಧ್ಯಕ್ಷರು.—ನಾನು ಅದನ್ನು ನೋಡುತ್ತೇನೆ.

Notice of an Adjournment Motion

(*ii*) *re* : Enquiry into murder case in Soraba Taluk

† ಶ್ರೀ ಕಾಗೋಡು ತಿಮ್ಮಪ್ಪ.—ನಾನು ನಿನ್ನೆ ದಿನ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೆ ; ಇವತ್ತು ಪ್ರಸ್ತಾಪ ಮಾಡಬಹುದೆಂದು ತಾವು ಹೇಳಿದ್ದೀರಿ. ಅದನ್ನು ತೆಗೆದುಕೊಳ್ಳುವುದಕ್ಕಿಂತ ಮುಂಚೆ, ಸ್ವಲ್ಪ ವಿಷಯಗಳನ್ನು ಸಂಕ್ಷಿಪ್ತವಾಗಿ ಹೇಳಿದರೆ ಆಧರ ಅರ್ಹತೆಯನ್ನು ತಾವು ಮನಗಾಣುವುದಕ್ಕೆ ಸಾಧ್ಯವಾಗುತ್ತದೆ.

Sri H. M. CHANNABASAPPA (Minister for Public Works).—I rise to a point of order. The adjournment motion has been submitted to the Hon. Speaker yesterday and the Speaker was pleased to say that it would be considered to-day. Now it is better that in all such matters,